# ದ್ವಿತೀಯ ಪಿ.ಯು.ಸಿ ಪೂರ್ವಸಿದ್ಧತಾ ಪರೀಕ್ಷೆ, ಜನವರಿ- 2023

## ವಿಷಯ : ಕನ್ನಡ (01)

ಸಮಯ : 3 ಗಂಟೆ 15 ನಿಮಿಷ ಅಂಕಗಳು : 100

### ಅ–ಬಹು ಆಯ್ಕೆ ಪ್ರಶ್ನೆ ವಿಭಾಗ.

**I. ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ : 1 x 10 = 10**

1. ಯಾವುದರಿಂದ ಪರಿಮಳವನ್ನು ಅರಿಯಬಹುದು ?
   ಅ) ದೀಪದಿಂದ ಆ) ಸೂರ್ಯನಿಂದ ಇ) ಪುಷ್ಪದಿಂದ ಈ) ಪರುಷದಿಂದ
2. ಅಣ್ಣನಾಜ್ಞೆಯಲ್ಲಿ ಭ್ರಮಿತನಾದವನು ಯಾರು ?
   ಅ) ನಕುಲ ಆ) ಪಾರ್ಥ ಇ) ಭೀಮ ಈ) ಸಹದೇವ.
3. ಕ್ರಿಸ್ಮಸ್ ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ ಯಾವ ರೂಪ ಕರುಣಿಸಿದೆ ?
   ಅ) ಮಂಜಿನ ರೂಪ ಆ) ಹತ್ತಿಯ ರೂಪ ಇ) ಗಿಡದ ರೂಪ ಈ) ಕೇಕಿನ ರೂಪ
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ ?
   ಅ) ದೀಪ ಆರಿದಾಗ ಆ)ಕತ್ತಲಾದಾಗ ಇ) ಬೆಳಕಾದಾಗ ಈ) ಬತ್ತಿ ತೀರಿದಾಗ
5. ಬಸಲಿಂಗನಿಗೆ ಕಾಣಿಸಿಕೊಂಡ ತೊಂದರೆ ಯಾವುದು ?
   ಅ) ಹೊಟ್ಟೆ ನೋವು ಆ) ಹಲ್ಲು ನೋವು ಇ) ಕಣ್ಣು ನೋವು ಈ) ಮಂಡಿನೋವು
6. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ ?
   ಅ) ಕೀರ್ತಿ ಆ) ಸೀತಾ ಇ) ನಿಶಾಶರ್ಮ ಈ) ಮುದ್ದೇಗೌಡ
7. ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು ?
   ಅ) ಪಂಚತಂತ್ರದ ಕತೆ ಆ) ಶೇಷ ರಾಮಾಯಣದ ಕತೆ ಇ) ಮಹಾಭಾರತದ ಕತೆ ಈ) ಜನಪದ ಕತೆ
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು ?
   ಅ) ಕೊಡಲಿ ಆ) ಕಟ್ಟಿಂಗ್ ಪ್ಲೈಯರ್ ಇ) ಹಣ ಈ) ಏಲಕ್ಕಿ
9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
   ಅ) ವೇಲಾಯುಧ ಆ) ಕೃಷ್ಣೇಗೌಡ ಇ) ಅಬ್ಬಾಸ್ ಈ) ಪ್ರಕಾಶ್
10. ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತ್ತಿದ್ದ ?
    ಅ) ಕಾಡಿನಲ್ಲಿ ಆ) ಶಿಕಾರಿ ಗಂಡಿಯಲ್ಲಿ ಇ) ಊರಿನಲ್ಲಿ ಈ) ಆಫೀಸಿನಲ್ಲಿ

**ಆ. 11. ಹೊಂದಿಸಿ ಬರೆಯಿರಿ : 5 x 1 = 5**

| | |
|---|---|
| ಅ) ನಾಗಚಂದ್ರ | 1. ತೆರೆದ ದಾರಿ |
| ಆ) ಬಸವಣ್ಣ | 2. ಅಂಬಿಕಾತನಯದತ್ತ |
| ಇ) ಪುರಂದರದಾಸರು | 3. ನಾನೆಂಬ ಮಾಯೆ |
| ಈ) ದ.ರಾ.ಬೇಂದ್ರೆ | 4. ಅಭಿನವ ಪಂಪ |
| ಉ) ಬಿ.ಸುಕನ್ಯಾಮಾರುತಿ | 5. ಪುರಂದರ ವಿಠಲ |
| | 6. ಕೂಡಲ ಸಂಗಮ ದೇವಾ |

**ಇ) 12. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : 5 x 1 = 5**

(ಬಣ್ಣ ಗಾಂಭೀರ್ಯ, ಮಗು, ಚಹಾ, ಪೂಣಚ್ಚಿ, ಬೌದ್ಧ)

ಕ) ಮಾರ್ಷನ್ ಜೊತೆಗಾರನ ಹೆಸರು ________

ಚ) ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ________

ಟ) ಬೆಳ್ಳಿಲೋಟ ________ ಕಳೆದುಕೊಂಡಿತ್ತು.

ತ) ಭೂಮಿಯ ಮೇಲಿನ ಮೊದಲ ವಿಜ್ಞಾನಿ ________

ಪ) ________ ಕಲಿಯುಗದ ಅಮೃತ.

ಆ– ವಿಭಾಗ

**II ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :** 4 x 2 = 8

13. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು ?
14. ಮಲಗಿರುವ ಭೀಮನನ್ನು ದ್ರೌಪದಿ ಹೇಗೆ ಎಬ್ಬಿಸಿದಳು ?
15. ಮುಂಬೈನ ಅವಸರದ ಜೀವನ ಚಿತ್ರಕ್ಕೆ ಎರಡು ಉದಾಹರಣೆ ನೀಡಿ.
16. ಮುದುಕ ಏನೆಂದು ಗೋಗರೆಯುತ್ತಾನೆ ?
17. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ ?

**ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :** 3 x 2 = 6

18. ಮುದ್ದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು ?
19. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ ?
20. ಕಲಾಂ ಅವರ ಬದುಕಿನ ಮಂತ್ರ ಯಾವುದು ?
21. ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು ?

**ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ :** 4 x 2 = 6

22. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸವಾದುದ್ದೇಕೆ ?
23. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ ?
24. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?
25. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು ?
26. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು ?

ಇ– ವಿಭಾಗ

**III ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :** 2 x 3 = 6

27. ಅಸಾಧ್ಯಮಪ್ಪ ಮರುವಕ್ಕಮಿಲ್ಲ.
28. ಕಲಿಭೀಮನೇ ಮಿಡುಕುಳ್ಳ ಗಂಡನು.
29. ಕುಸುಮ ವಾಸನೆಯಿಲ್ಲ ಕೊಡಲು ಸ್ಥಳವಿಲ್ಲ.

**ಆ)ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :** 1 x 3 = 3

30. ನಾವು ಯಾವ ಪತ್ರಿಕೆಗಳನ್ನು ಓದುತ್ತಿದ್ದೇನೆ ?
31. ಇಂದು ಸ್ಪೆಶಲ್ ಅವಲಕ್ಕಿ ಸೂಸಲ ಮಾಡಿದ್ದೇನೆ.

**ಇ)ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ :** 1 x 3 = 3

32. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.
33. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

ಈ– ವಿಭಾಗ

**IV ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** 2 x 4 = 8

34. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.
35. ವೀರ, ಮಂತ್ರಿ ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

36. ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು ? ಹೇಗೆ ?

37. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ ? ಚರ್ಚಿಸಿ

ಆ)ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 1 x 4 = 4

38. ಬಸಲಿಂಗ ಡಾ॥ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣಗಳೇನು ?

39. ಅಂತರಾಷ್ಟ್ರೀಯ ವಿದ್ಯಾಮಾನಗಳಿಂದಾಗಿ ವಾಲ್‌ಪರ್ರೈಗೆ ಒದಗಿದ ಸಮಸ್ಯೆಗಳೇನು ?

40. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 1 x 4 = 4

41. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ, ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ?

42. ಟೆಲಿಪೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

43. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು ?

ಉ- ವಿಭಾಗ

V ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : 1 x 5 = 5

44. ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ

ಅಥವಾ

ನಿಶೆಯಿಳಿದ ಉಷೆಯ, ಎಳನಗೆಯ ಬಗೆಗೆ, ಸೋತಿರಲು ಜಗವು ಸವಿಗೆ
ಕಣ್ಣಿದಿರು ಒಂದು, ಕಟ್ಟಿತ್ತು ಕನಸು ; ಕೊಗೊಂದು ಬಂತು ಕಿವಿಗೆ
ಮಕ್ಕಳಿರ ಕೇಳಿ, ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು
ಈ ತುಂಬಿಬಾಳು, ತುಂಬಿರುವ ತನಕ, ತುಂತುಬಿ ಕುಡಿಯಬೇಕು.

ಭಾಷಾಭ್ಯಾಸ

VI ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 6 x 2 = 12

45. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.
ತೊರೆ, ಹೊಳೆ, ಮರ್ಯಾದೆ.

46. ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.
ತಮ, ಕಾಂತರ, ಮಾಹೆ

47. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
ಹೆಮ್ಮರ, ದುರ್ಜನ, ಹಸಿರುಕಂಬಳಿ.

48. ಕೆಳಗಿನ ಎರಡು ಪದಗಳಿಗೆ ತದ್ಭವರೂಪ ಬರೆಯಿರಿ.
ಅಗ್ನಿ, ಯೋಗಿ, ಸಂಸ್ಕೃತ

49. ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ
ತಲೆದೂಗು, ಕೈಕೊಡು, ದಾರಿದೀಪ

50. ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿರಿ.
ಕಲಿಭೀಮನೇ, ಧಣಿಗಳಿಂದ, ಗದ್ಯದೊಳ್

51. ಕೆಳಗಿನ ಎರಡು ಪದಗಳಿಗೆ ಕಾಲಸೂಚಕಗಳನ್ನು ಬರೆಯಿರಿ

ಹೋದವು, ಬರುವಳು, ನಲಿಯುತ್ತಾರೆ.

**ಆ)ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ :** 1 x 5 = 5

52. ಪುಸ್ತಕಗಳ ಮಹತ್ವ

ಅಥವಾ

ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ

**ಇ) ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ :** 1 x 4 = 4

53. ಶೈಕ್ಷಣಿಕ ಪ್ರವಾಸಕ್ಕೆ ತೆರಳಲು ಅನುಮತಿ ಕೋರಿ ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

ಅಥವಾ

ಬಸ್‌ಪಾಸ್ ಕೋರಿ ಸಾರಿಗೆ ಅಧಿಕಾರಿಗೊಂದು ಪತ್ರ ಬರೆಯಿರಿ.

**ಈ)ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿರಿ :** 1 x 4 = 4

54. ಹಣಕ್ಕಿಂತ ಗುಣ ಮುಖ್ಯ

ಅಥವಾ

ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.